## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ460/2023**

**ಸಿ.ಡಬ್ಲ್ಯೂಃ 3, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ರಾಘವೇಂದ್ರ

ತಂದೆಯ ಹೆಸರು : ಮಾಸ್ತಪ್ಪ ನಾಯ್ಕ

ವಯಸ್ಸು : 39 ವರ್ಷ

ಉದ್ಯೋಗ : ಆಟೋ ಚಾಲಕ

ವಾಸ್ತವ್ಯ : ಮೂಡ ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 06/03/2026**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 12.05.2022 ರಂದು ಟ್ಯಾಂಕರ್ ಲಾರಿ ನಂ. ಕಎ 01 ಎಡಿ 7544 ಮತ್ತು ಸ್ಕೂಟಿ ನಡುವೆ ಅಪಘಾತ ಆಗಿತ್ತು . ಪಂಚನಾಮೆಗೆ ನನಗೆ ಪೊಲೀಸರು ಕರೆದಿದ್ದರು. ಚಾಸಾ 2 ಮತ್ತು ಪೊಲೀಸರು ಆ ಕಾಲಕ್ಕೆ ನನ್ನ ಜೊತೆ ಇದ್ದರು. ಪಂಚನಾಮೆ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಮಾಡಿದ್ದರು. ನನ್ನ ಸಹಿ ಪಡೆದಿದ್ದರು. ಆ ಕಾಲಕ್ಕೆ ಪೊಟೋ ತೆಗೆದಿದ್ದರು.

2. ಸಾಕ್ಷಿಯು ನಿಪಿ-4 ಮತ್ತು 5 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಸಿ ಮತ್ತು 5 ಸಿ ಎಂದು ಗುರುತಿಸಲಾಯಿತು.ಸಾಕ್ಷಿ ನಿಪಿ -1 ಮತ್ತು 2 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಮ ಎನ ವಕೀಲರಿಂದ,**

ನಾನು ಸದರಿ ಪ್ರಕರಣ ಹೊರತುಪಡಿಸಿ ಬೇರೆ ಪ್ರಕರಣದಲ್ಲಿ ಪಂಚ ಸಾಕ್ಷಿದಾರನಾಗಿರುತ್ತೇನೆ. ಪೊಲೀಸರು ಪಂಚ ಸಾಕ್ಷಿಯಾಗಿ ಬರಲು ನನಗೆ ನೊಟೀಸನ್ನು ನೀಡಿದ್ದು ಇಲ್ಲಾ. ಗುನ್ನಾ ಸ್ಥಳ ರಾಷ್ಟ್ರೀಯ ಹೆದ್ದಾರಿ ಎಷ್ಟು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. 2022 ರಲ್ಲಿ ಗುನ್ನಾ ಸ್ಥಳದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿತ್ತು. ಸದರಿ ಅಪಘಾತ ಕುಂದಾಪುರ ಕಡೆಯಿಂದ ಹೊನ್ನಾವರ ಕಡೆಗೆ ಬರುವ ಎಡಭಾಗದಲ್ಲಿ ಆಗಿತ್ತು. ಅಪಘಾತಕ್ಕೆ ಒಳಗಾದ ಟ್ಯಾಂಕರಿನ ಯಾವ ಭಾಗದಲ್ಲಿ ಡ್ಯಾಮೇಜ್ ಆಗಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತಕ್ಕೆ ಒಳಗಾದ ಸ್ಕೂಟಿ ಬಣ್ಣ ಹಾಗೂ ನಂಬರ್ ನನಗೆ ಗೊತ್ತಿಲ್ಲ. ಪಂಚನಾಮೆ ಬರೆಯಲು ಪೊಲೀಸರಿಗೆ ನಾನು ಮಾಹಿತಿ ನೀಡಿಲ್ಲ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ಓದಿಲ್ಲ ಸಹಿ ಮಾಡಲು ಹೇಳಿದ ಕಾರಣ

ನಾನು ಸಹಿ ಮಾಡಿರುತ್ತೇನೆ. ನಕ್ಷೆಯನ್ನು ಠಾಣೆಯಲ್ಲಿ ತಯಾರಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಅಪಘಾತವು ಮೃತನ ತಪ್ಪಿನಿಂದ ಆದರೂ ಸಹ ಪೊಲೀಸರ ಮುಲಾಜಿಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬರೆಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**